**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ**

**ವಿಶೇಷ ಮೊಕದ್ದಮೆ ಸಂಖ್ಯೆಃ- 997/2021**

**ಪ್ರಾಸಾಃ- 12 ಚಾಸಾಃ- 20**

| | | |
|---|---|---|
| ಸಾಕ್ಷಿಯ ಹೆಸರು | : | ಎಂ.ಜಿ.ಸತ್ಯನಾರಾಯಣ ರಾವ್ |
| ತಂದೆಯ ಹೆಸರು | : | ಎಂ.ಮಂಕೋಜಿ ರಾವ್ |
| ವಯಸ್ಸು | : | 50 ವರ್ಷ |
| ವೃತ್ತಿ | : | ಡಿ ವೈ ಎಸ್ ಪಿ, ಚಳ್ಳಕೆರೆ |
| ವಾಸಸ್ಥಳ | : | ಚಳ್ಳಕೆರೆ |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 26.3.2026**

**ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ**

ನಾನು ಅಕ್ಟೋಬರ್ 2020 ರಿಂದ ಜನವರಿ 2023 ರವರೆಗೆ ಡಿ ವೈ ಎಸ್ ಪಿ, ಸಿರುಗುಪ್ಪ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 13-8-2021 ರಂದು ಎಸ್ ಪಿ ಬಳ್ಳಾರಿ ರವರ ಆದೇಶದ ಪ್ರಕಾರ ನಾನು ಈ ಕೇಸಿನ ತನಿಖೆಯನ್ನು ಚಾಸಾ 19 ರವರಿಂದ ವಹಿಸಿಕೊಂಡಿದ್ದೆ. ಸದರಿ ಪತ್ರವನ್ನು ನಿಪಿ-17 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-17(ಎ) ಎಂದು ಗುರುತಿಸಲಾಯಿತು.

ಅದೇ ದಿವಸ ನಿಪಿ-6 ಮತ್ತು 7 ರಂತೆ ಕೃತ್ಯ ಸ್ಥಳದ ಪಹಣಿಗಳನ್ನು ಪಡೆದುಕೊಂಡಿದ್ದೆ. ಸಾಕ್ಷಿಯ ಸಹಿಗಳನ್ನು ನಿಪಿ-6(ಎ) ಮತ್ತು ನಿಪಿ-7(ಎ) ಎಂದು ಗುರುತಿಸಲಾಯಿತು.

ಅದೇ ದಿವಸ ಘಟನೆ ಸ್ಥಳಕ್ಕೆ ಭೇಟಿ ನೀಡಿ ಚಾಸಾ 2 ಮತ್ತು 3 ರವರ ಸಮಕ್ಷಮ ಮುಂಜಾನೆ 8-00 ಗಂಟೆಯಿಂದ 9-00 ಗಂಟೆ ಸಮಯದಲ್ಲಿ ಚಾಸಾ 1 ತೋರಿಸಿದ ಘಟನಾ ಸ್ಥಳದಲ್ಲಿ ನಿಪಿ-2 ರಂತೆ ಕೃತ್ಯಸ್ಥಳ ಪಂಚನಾಮೆಯನ್ನು ಮಾಡಿದ್ದೆ. ನಿಪಿ-2 ರಲ್ಲಿ ಸಾಕ್ಷಿಯ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. ನಿಪಿ-3 ರಂತೆ ಪಂಚರಿಗೆ ನೋಟೀಸ್ ನೀಡಿದ್ದೆ. ಸಾಕ್ಷಿಯ ಸಹಿಯನ್ನು ನಿಪಿ-3(ಸಿ) ಎಂದು ಗುರುತಿಸಲಾಯಿತು. ಪಂಚನಾಮೆ ಸಮಯದಲ್ಲಿ

ಮು ಮಾ 1 ರಿಂದ 5 ನ್ನು ಜಪ್ತು ಮಾಡಿಕೊಂಡಿದ್ದೆ. ನಿಪಿ-4 ಮತ್ತು 5 ರಂತೆ ಫೋಟೋ ತೆಗೆಸಿದ್ದೆ. ಚಾಸಾ 16 ರವರಿಂದ ಕೃತ್ಯ ಸ್ಥಳದ ನಕಾಶೆಯನ್ನು ಪಡೆದುಕೊಂಡಿದ್ದೆ. ಸದರಿ ನಕಾಶೆಯನ್ನು ನಿಪಿ-18 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-18(ಎ) ಎಂದು ಗುರುತಿಸಲಾಯಿತು. ಪಂಚನಾಮೆ ಸಮಯದಲ್ಲಿ ಚಾಸಾ 1 ರವರ ಮರು ಹೇಳಿಕೆ, ಚಾಸಾ 4 ಮತ್ತು 5 ರವರ ಹೇಳಿಕೆಯನ್ನು ಪಡೆದುಕೊಂಡಿದ್ದೆ. ಮು ಮಾ 1 ರಿಂದ 5 ರಲ್ಲಿ ಸಾಕ್ಷಿಯ ಸಹಿಗಳನ್ನು ಮು ಮಾ 1(ಬಿ) ರಿಂದ ಮು ಮಾ 5(ಬಿ) ಎಂದು ಗುರುತಿಸಲಾಯಿತು.

ದಿಃ 14-8-2021 ರಂದು ಚಾಸಾ 19 ರವರು ಮದ್ಯಾಹ್ನ 12-00 ಗಂಟೆಗೆ 6 ನೇ ಆರೋಪಿಯನ್ನು ಹಿಡಿದು ನನ್ನ ಮುಂದೆ ಹಾಜರುಪಡಿಸಿದ್ದರು. ನಾನು 6 ನೇ ಆರೋಪಿಯನ್ನು ದಸ್ತಗಿರಿ ಮಾಡಿ ನ್ಯಾಯಾಲಯದ ಮುಂದೆ ಹಾಜರುಮಾಡಿದ್ದೆ.

ಅದೇ ದಿವಸ ಪಿರ್ಯಾದಿ ಹಾಗೂ ಆರೋಪಿತರ ಜಾತಿ ಪ್ರಮಾಣ ಪತ್ರವನ್ನು ನೀಡುವಂತೆ ತಹಸೀಲ್ದಾರ್ ಸಿರುಗುಪ್ಪ ರವರಿಗೆ, ಗಾಯಾಳುಗಳ ಗಾಯ ಪ್ರಮಾಣ ಪತ್ರ ನೀಡುವಂತೆ ವಿಮ್ಸ್ ಆಸ್ಪತ್ರೆಗೆ ಮತ್ತು ಕೃತ್ಯಸ್ಥಳ ನಕಾಶೆ ನೀಡುವಂತೆ ಪಿ ಡಬ್ಲ್ಯೂ ಡಿ ಅಧಿಕಾರಿಗೆ ಮನವಿ ಪತ್ರ ಸಲ್ಲಿಸಿದ್ದೆ. ತಹಸೀಲ್ದಾರ್ ರವರಿಗೆ ನೀಡಿದ ಮನವಿ ಪತ್ರವನ್ನು ನಿಪಿ-19 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-19(ಎ) ಎಂದು ಗುರುತಿಸಲಾಯಿತು.

ಅದೇ ದಿವಸ ಸಾಕ್ಷಿದಾರರಾದ ಚಾಸಾ 6, 7, 8 ಮತ್ತು 9 ರವರ ಹೇಳಿಕೆಗಳನ್ನು ಪಡೆದುಕೊಂಡಿದ್ದೆ. ಚಾಸಾ 6 ಮತ್ತು 8 ರವರು ನನ್ನ ಮುಂದೆ ನಿಪಿ-8 ಮತ್ತು 15 ರಂತೆ ಹೇಳಿಕೆಗಳನ್ನು ನೀಡಿದ್ದಾರೆ.

ದಿಃ 17-8-2021 ರಂದು ಚಾಸಾ 14 ರವರ ಮೂಲಕ ಜಪ್ತಾದ ಮುದ್ದೆ ಮಾಲುಗಳನ್ನು ಆರ್ ಎಫ್ ಎಸ್ ಎಲ್ ಕಲ್ಬುರ್ಗಿಗೆ ರಾಸಾಯನಿಕ ಪರೀಕ್ಷೆಗಾಗಿ ಕಳುಹಿಸಿಕೊಟ್ಟಿದ್ದೆ. ಸದರಿಯವರು ಆರ್ ಎಫ್ ಎಸ್ ಎಲ್ ಕಲ್ಬುರ್ಗಿ ಯಿಂದ ಸ್ವೀಕೃತಿ ಪತ್ರವನ್ನು ಪಡೆದು ಹಾಜರುಪಡಿಸಿದ್ದರು. ಸದರಿ ಸ್ವೀಕೃತಿ ಪತ್ರವನ್ನು ನಿಪಿ-20 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-20(ಎ) ಎಂದು ಗುರುತಿಸಲಾಯಿತು. ಚಾಸಾ 14 ರವರ ಹೇಳಿಕೆಯನ್ನು ದಿಃ 20-8-2021 ರಂದು ಪಡೆದುಕೊಂಡಿದ್ದೆ.

ದಿಃ 25-8-2021 ರಂದು ಚಾಸಾ 19 ರವರು ಆರೋಪಿ 1, 2 ಮತ್ತು 3 ರವರನ್ನು ಹಿಡಿದು ಮುಂಜಾನೆ 11-00 ಗಂಟೆಗೆ ನನ್ನ ಮುಂದೆ ಹಾಜರುಪಡಿಸಿದ್ದರು. ಸದರಿ ಆರೋಪಿತರನ್ನು ವಿಚಾರಣೆ ಮಾಡಿ ಅವರನ್ನು ದಸ್ತಗಿರಿ ಮಾಡಿ ಮಾನ್ಯ ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದೆ.

ದಿಃ 27-8-2021 ರಂದು ಚಾಸಾ 10 ಮತ್ತು 11 ರವರ ಹೇಳಿಕೆಗಳನ್ನು ಪಡೆದುಕೊಂಡಿದ್ದೆ. ಸದರಿಯವರು ನಿಪಿ-9 ಮತ್ತು 10 ರಂತೆ ನನ್ನ ಮುಂದೆ ಹೇಳಿಕೆಗಳನ್ನು ನೀಡಿರುತ್ತಾರೆ.

ದಿಃ 8-9-2021 ರಂದು ಚಾಸಾ 18 ರವರಿಂದ ಪಿರ್ಯಾದುದಾರರು, ನೊಂದ ಸಾಕ್ಷಿದಾರರು ಮತ್ತು ಆರೋಪಿತರ ಜಾತಿ ಪ್ರಮಾಣ ಪತ್ರವನ್ನು ಪಡೆದುಕೊಂಡಿದ್ದೆ. ಸದರಿ ದಾಖಲೆಯನ್ನು ನಿಪಿ-21 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ-21(ಎ) ಎಂದು ಗುರುತಿಸಲಾಯಿತು.

ದಿಃ 10-9-2021 ರಂದು ಚಾಸಾ 17 ರವರಿಂದ ಗಾಯಾಳುಗಳ ಗಾಯ ಪ್ರಮಾಣ ಪತ್ರಗಳನ್ನು ನಿಪಿ-11 ರಿಂದ 14 ರಂತೆ ಪಡೆದುಕೊಂಡಿದ್ದೆ. ಸಾಕ್ಷಿಯ ಸಹಿಗಳನ್ನು ನಿಪಿ-11(ಬಿ) ರಿಂದ ನಿಪಿ-14(ಬಿ) ಎಂದು ಗುರುತಿಸಲಾಯಿತು.

ದಿಃ 21-9-2021 ರಂದು ಚಾಸಾ 12, 13 ಮತ್ತು 15 ರವರ ಹೇಳಿಕೆಗಳನ್ನು ಪಡೆದಿದ್ದೆ. ತನಿಖೆ ಸಮಯದಲ್ಲಿ ಆರೋಪಿತರ ವಿರುದ್ದ ಆರೋಪ ಸಾಬೀತಾಗಿದ್ದರಿಂದ ಮತ್ತು ಆರ್ ಎಫ್ ಎಸ್ ಎಲ್ ವರದಿ ಪಡೆಯುವುದು ಬಾಕಿ ಇದ್ದುದರಿಂದ ಮಾನ್ಯ ನ್ಯಾಯಾಲಯದ ಮುಂದೆ ಸದರಿ ಸಂಗತಿಯನ್ನು ನಮೂದಿಸಿ ದೋಷರೋಪಣೆ ಪಟ್ಟಿಯನ್ನು ಸಲ್ಲಿಸಿದ್ದೆ. ಸಾಕ್ಷಿಯು ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. ದಿಃ 17-1-2022 ರಂದು ಆರ್ ಎಫ್ ಎಸ್ ಎಲ್ ವರದಿಯನ್ನು ಪಡೆದುಕೊಂಡು ನ್ಯಾಯಾಲಯದ ಮುಂದೆ ಪತ್ರದೊಂದಿಗೆ ಹಾಜರು ಪಡಿಸಿದ್ದೆ. ಆರ್ ಎಫ್ ಎಸ್ ಎಲ್ ವರದಿಯನ್ನು ನಿಪಿ-22 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ  ಆರೋಪಿತರ ಪರ ಶ್ರೀ    ಎಸ್ ಆರ್ ಎಸ್ ವಕೀಲರಿಂದಃ

ನಿಪಿ-1 ರಲ್ಲಿ ವೈದ್ಯರ ಸಹಿ ಮತ್ತು ಸೀಲು ಇಲ್ಲ ಎಂದರೆ ಸರಿ. ವೈದ್ಯರು ನಿಪಿ-1 ರಲ್ಲಿ ಚಾಸಾ 1 ಹೇಳಿಕೆ ಕೊಡುವ ಸ್ಥಿತಿಯಲ್ಲಿ ಇದ್ದಾನೆ ಎಂದು ಹೇಳಿ ಯಾವುದೇ ಹಿಂಬರಹವನ್ನು ನೀಡಿಲ್ಲ ಎಂದರೆ ಸರಿ. ನಾನು ತನಿಖೆ ಸಮಯದಲ್ಲಿ ಚಾಸಾ 1 ರವರಿಂದ ತಹಸೀಲ್ದಾರ್ ನ್ಯಾಯಾಲಯದಲ್ಲಿ ಇದ್ದ ಪ್ರಕರಣದ ದಾಖಲೆಯನ್ನು ಪಡೆದುಕೊಂಡಿಲ್ಲ. ಚಾಸಾ 1 ರವರಿಗೆ ಮರು ಹೇಳಿಕೆ ನೀಡುವ ಸಲುವಾಗಿ ನೀಡಿದ ಬಗ್ಗೆ ಯಾವುದೇ ನೋಟೀಸ್ ನೀಡಿಲ್ಲ ಎಂದರೆ ಸಾಕ್ಷಿಯು ಚಾಸಾ 1 ಪಂಚನಾಮೆ ಸಮಯದಲ್ಲಿ ಹಾಜರು ಇದ್ದುದರಿಂದ ಯಾವುದೇ ನೋಟೀಸ್ ನೀಡಿಲ್ಲ ಎಂದು ಹೇಳಿರುತ್ತಾರೆ. ಸರ್ವೆ ನಂಃ 206 ಯಾರದ್ದು ಎಂದು ತನಿಖೆ  ಮಾಡಿ ಸದರಿ ಜಮೀನಿನ ಉತಾರೆಯನ್ನು ನಾನು ದೋಷಾರೋಪಣೆ ಪಟ್ಟಿ ಜೊತೆ ಹಾಜರು ಪಡಿಸಿಲ್ಲ. ಪೋಟೋಗಳನ್ನು ತೆಗೆಸಿದ ಬಗ್ಗೆ ಚಾಸಾ 13 ರವರಿಂದ ಕಲಂ 65 ಬಿ ಪ್ರಮಾಣ ಪತ್ರವನ್ನು ಪಡೆದುಕೊಂಡಿದ್ದೇ. ಚಾಸಾ 1 ರವರ ಹೊಲದ ಉತ್ತರಕ್ಕೆ ಇದ್ದ ಕುರುಬರ ಬಚ್ಚಪ್ಪ ಈತನ ಹೇಳಿಕೆಯನ್ನು ನಾನು ಪಡೆದುಕೊಂಡಿಲ್ಲ. ಚಾಸಾ 5 ರಿಂದ 8, 10 ಮತ್ತು 11 ರವರ ಹೊಲಗಳು ಪಿರ್ಯಾದುದಾರರ ಹೊಲದ ಆಜು ಬಾಜುವಿನಲ್ಲಿ ಇತ್ತು ಎಂದು ತೋರಿಸಲು ಸದರಿಯವರ ಜಮೀನುಗಳ ಸರ್ವೆ ನಂಬರ್ ಬಗ್ಗೆ ವಿಚಾರಿಸಿ ದಾಖಲೆ ಪಡೆದಿದ್ದೀರಾ ಕೇಳಿದ ಪ್ರಶ್ನೆಗೆ ಸಾಕ್ಷಿಯು ಅದರ ಅವಶ್ಯಕತೆ ಕಂಡು ಬಂದಿರುವುದಿಲ್ಲ ಎಂದು ಹೇಳಿರುತ್ತಾರೆ. ಚಾಸಾ 5 ರವರು ಹೂಳೂರು ಗ್ರಾಮಕ್ಕೆ ಸೇರಿದವರು ಎಂದು ತೋರಿಸಲು ಅವರ ಆಧಾರ್ ಕಾರ್ಡ್ ಪಡೆದಿಲ್ಲ. ಚಾಸಾ 5 ರವರು ಆಂಧ್ರಪ್ರದೇಶದ ಕೋಗಿಲೆತೋಟದ ವಾಸಿ ಎಂದರೆ ಸರಿಯಲ್ಲ. ಸರ್ವೆ ನಂಃ 205 ಮುಖ್ಯ ರಸ್ತೆಯಿಂದ ಸುಮಾರು 500 ಮೀ. ಒಳಗೆ ಇದೆ. ಮುಖ್ಯ ರಸ್ತೆಯಿಂದ 20 ಎಕರೆ ಹೊಲ ಆದ ನಂತರ ಸದರಿ ಸರ್ವೆ ನಂಬರ್ ಇದೆ ಎಂದರೆ ನನಗೆ ಮಾಹಿತಿ ಇಲ್ಲ. ಗಾಯ ಪ್ರಮಾಣ ಪತ್ರದಲ್ಲಿರುವಂತಹ ಗಾಯಗಳು ಆಗಿರುವ ಬಗ್ಗೆ ಪಿರ್ಯಾದುದಾರರು ತಮ್ಮ ಹೇಳಿಕೆಯಲ್ಲಿ ಹೇಳಿರುತ್ತಾರೆ.  ನಾನು ಪಿರ್ಯಾದುದಾರರ ಮಕ್ಕಳಾದ ಶಂಕರ್ ಮತ್ತು ಲಕ್ಷ್ಮಿ ರವರ ಹೇಳಿಕೆಗಳನ್ನು ಪಡೆದುಕೊಂಡಿಲ್ಲ. ಮುದ್ದೆ ಮಾಲುಗಳ ಮೇಲೆ ಇದ್ದ ರಕ್ತ ಪಿರ್ಯಾದುದಾರರದು ಮತ್ತು ಆತನ ಹೆಂಡತಿಯದು ಎಂದು ತಿಳಿದುಕೊಳ್ಳಲು

ಎಫ್ ಎಸ್ ಎಲ್ ವರದಿ ಪಡೆದುಕೊಂಡಿದ್ದೆ. ನಾನು ಅವರ ಬ್ಲಡ್ ಗ್ರೂಪ್ ಅನ್ನು ಪ್ರತ್ಯೇಕವಾಗಿ ವೈದ್ಯರಿಗೆ ಕಳುಹಿಸಿ ಪರೀಕ್ಷೆ ಮಾಡಿಸಿಲ್ಲ. ಎಫ್ ಎಸ್ ಎಲ್ ವರದಿಯಲ್ಲಿ ರಕ್ತದ ಗುಂಪು ಯಾವುದು ಎಂದು ನಮೂದಿಸಿಲ್ಲ ಎಂದರೆ ಸರಿ. ನಾನು ಆರೋಪಿತರು ಸ್ವಖುಷಿ ಹೇಳಿಕೆಗಳನ್ನು ಪಡೆದುಕೊಂಡಿಲ್ಲ. ಮು ಮಾ 1 ರಿಂದ 5 ವಸ್ತುಗಳಿಗೂ ಮತ್ತು ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಸದರಿ ವಸ್ತುಗಳನ್ನು ಈ ಪ್ರಕರಣಕ್ಕೋಸ್ಕರ ಸುಳ್ಳು ಸೃಷ್ಟಿ ಮಾಡಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಮತ್ತು ಪಿರ್ಯಾದುದಾರರ ನಡುವೆ ಸಿರುಗುಪ್ಪ ನ್ಯಾಯಾಲಯದಲ್ಲಿ ಸಿವಿಲ್ ವ್ಯಾಜ್ಯ ಇದೆ ಎಂದರೆ ಸರಿ. ಹೊಲವನ್ನು ಕಬಳಿಸಬೇಕೆಂಬ ಉದ್ದೇಶದಿಂದ ಪಿರ್ಯಾದುದಾರರು ಮತ್ತು ಅವರ ಸಂಬಂಧಿಕರು ಆರೋಪಿತರ ವಿರುದ್ಧ ಸುಳ್ಳು ದೂರು ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಚಾಸಾ 1 ಹೇಳಿದಂತೆ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ದೋಷರೋಪಣೆ ಪಟ್ಟಿ ಯಲ್ಲಿ ತೋರಿಸಸಿರುವ ಪ್ರತ್ಯಕ್ಷದರ್ಶಿ ಸಾಕ್ಷಿದಾರರು ಯಾರೂ ಸಹ ಘಟನೆಯನ್ನು ಪ್ರತ್ಯಕ್ಷವಾಗಿ ನೋಡಿದ ಸಾಕ್ಷಿದಾರರು ಆಗಿರುವುದಿಲ್ಲ ಎಂದರೆ ಸರಿಯಲ್ಲ. ಸದರಿಯವರು ಪಿರ್ಯಾದುದಾರರ ಸಂಬಂಧಿಕರುಗಳು ಮತ್ತು ಸ್ನೇಹಿತರು ಎಂದರೆ ಸರಿಯಲ್ಲ. ನಾನು ಪಿರ್ಯಾದುದಾರರಿಗೆ ಸಹಾಯ ಮಾಡುವ ಉದ್ದೇಶದಿಂದ ಎಲ್ಲಾ ದಾಖಲೆಗಳನ್ನು ಸುಳ್ಳು ಸೃಷ್ಟಿ ಮಾಡಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ದೋಷಾರೋಪಣೆ ಪಟ್ಟಿಯಲ್ಲಿ ಹೇಳಿರುವಂತೆ ಪಿರ್ಯಾದುದಾರರಿಗೆ ಮತ್ತು ಅವರ ಸಂಬಂಧಿಕರುಗಳಿಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲ, ಹೊಡೆದಿಲ್ಲ, ಜಾತಿ ನಿಂದನೆ ಮಾಡಿಲ್ಲ, ಕೊಲೆ ಪ್ರಯತ್ನ ಮಾಡಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).**

ಓ. ಹೇ. ಕೆ. ಸರಿ ಇದೆ.

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ವಿಶೇಷ ನ್ಯಾಯಾಲಯ, ಬಳ್ಳಾರಿ.**